ಕೆಳಗೆ ಬಾಗಿಸಿತು. ಆದರೆ ಆ ಬಾಲಕ ತುಂಬ ಚಿಕ್ಕವನಾಗಿದ್ದ.

ಅದನ್ನು ನೋಡುತ್ತಿರುವಂತೆ ಆ ರಾಕ್ಷಸನ ಹೃದಯ ಕರಗಿತು. "ನಾನೆಂಥ ಸ್ವಾರ್ಥಿಯಾಗಿರುವೆ! ವಸಂತ ಋತು ಏಕೆ ಬಂದಿಲ್ಲವೆಂಬುದು ನನಗೀಗ ಗೊತ್ತಾಯಿತು. ಆ ಬಡಪಾಯಿ ಪುಟ್ಟ ಬಾಲಕನನ್ನು ಎತ್ತಿ ಆ ಮರದ ತುದಿಯ ಮೇಲೆ ಕೂರಿಸುವೆ. ಈ ಹೂದೋಟದ ಸುತ್ತಲೂ ಕಟ್ಟಿರುವ ಗೋಡೆಯನ್ನು ಕೆಡವಿಬಿಡುವೆ. ಇನ್ನು ಮುಂದೆ ಎಂದೆಂದಿಗೂ ನನ್ನ ಈ ಹೂದೋಟ ಮಕ್ಕಳ ಆಟದ ಮೈದಾನವಾಗಿರಲಿ" ಎಂದುಕೊಂಡ. ತನ್ನ ದುಷ್ಕಾರ್ಯದ ಬಗ್ಗೆ ಈಗ ಆತ ತುಂಬ ವ್ಯಥಿತನಾಗಿದ್ದ.

ಹಾಗೆಯೇ ಆತ ತನ್ನ ಮಹಡಿಯಿಂದ ಕೆಳಗಿಳಿದು, ಸಾವಕಾಶವಾಗಿ ಮುಂಬಾಗಿಲನ್ನು ತೆರೆದು ಮಕ್ಕಳು ಆಟವಾಡುತ್ತಿದ್ದ ಸ್ಥಳಕ್ಕೆ ಬಂದ. ಆದರೆ ಆತನನ್ನು ಕಂಡ ಕ್ಷಣವೇ ಮಕ್ಕಳು ಭಯಭೀತರಾಗಿ ಓಡಿ ಹೋದರು. ಮತ್ತೆ ಆ ಹೂದೋಟದ ತುಂಬ ಚಳಿಗಾಲ ಆವರಿಸಿತು. ಕೇವಲ ಆ ಪುಟ್ಟ ಬಾಲಕ ಮಾತ್ರ ಓಡಿ ಹೋಗಲಿಲ್ಲ. ಏಕೆಂದರೆ ಆ ರಾಕ್ಷಸ ಬರುವುದನ್ನು ಆತ ನೋಡಿರಲಿಲ್ಲ. ಕಣ್ಣೀರು ತುಂಬಿಕೊಂಡ ಆತ ಅಲ್ಲಿಯೇ ನಿಂತಿದ್ದ. ಆ ರಾಕ್ಷಸ ಬಾಲಕನಿಗೆ ಗೊತ್ತಾಗದಂತೆ ಆತನ ಹಿಂಬದಿಯಿಂದ ಬಂದು ಆತನನ್ನು ಮೃದುವಾಗಿ ಎತ್ತಿ ಮರದ ಮೇಲೆ ಕೂರಿಸಿದ. ಒಮ್ಮೆಲೆ ಆ ಮರದ ಮೈ ತುಂಬ ಹೂಗಳೊಡೆದವು. ಹಕ್ಕಿಗಳು ಬಂದು ಅಲ್ಲಿ ಹಾಡತೊಡಗಿದವು. ಆ ಪುಟ್ಟ ಬಾಲಕ ತನ್ನೆರಡೂ ಕೈಗಳನ್ನು ಮುಂದೆ ಚಾಚಿ ಆತನ ಕುತ್ತಿಗೆ ಬಳಸಿ ಹಿಡಿದುಕೊಂಡು ಆತನನ್ನು ಮುದ್ದಿಸಿದ. ಉಳಿದ ಮಕ್ಕಳು ಆ ದೃಶ್ಯ ಕಂಡು, ಆ ರಾಕ್ಷಸ ಮೊದಲಿನಂತೆ ದುಷ್ಟನಲ್ಲ ಎಂದುಕೊಂಡು, ಓಡೋಡುತ್ತ ಮರಳಿ ಬಂದರು. ಅವರ ಜೊತೆ ವಸಂತ ಋತು ಕೂಡ ಬಂತು. "ಮುದ್ದು ಮಕ್ಕಳೆ, ಈಗ ಇದು ನಿಮ್ಮ ಹೂದೋಟ!" ಎಂದು ಹೇಳುತ್ತ, ಒಂದು ದೊಡ್ಡ ಗುದ್ದಲಿಯಿಂದ ಹೂದೋಟದ ಸುತ್ತಲಿದ್ದ ಗೋಡೆಯನ್ನು ಒಡೆದು ಹಾಕಿದ. ಪ್ರತಿನಿತ್ಯ ಹನ್ನೆರಡು ಗಂಟೆಗೆ ಜನರು ಪೇಟೆಗೆ ಹೋಗುವಾಗ, ಅವರು ಹಿಂದೆಂದೂ ಕಂಡಿರದಷ್ಟು ಸುಂದರವಾದ ಆ ಹೂದೋಟದಲ್ಲಿ, ಆ ರಾಕ್ಷಸ ಮಕ್ಕಳೊಡನೆ ಆಟವಾಡುತ್ತಿರುವುದನ್ನು ನೋಡುತ್ತ, ಮುಂದೆ ಸಾಗುತ್ತಿದ್ದರು.

ಇಡೀ ದಿನ ಮಕ್ಕಳು ಆ ಹೂದೋಟದಲ್ಲಿ ಆಟವಾಡುತ್ತಿದ್ದರು. ಸಂಜೆ ಮನೆಗೆ ಮರಳುವಾಗ, ಅವರು ರಾಕ್ಷಸನ ಬಳಿಗೆ ಬಂದು 'ಗುಡ್‌ಬಾಯ್' ಹೇಳುತ್ತಿದ್ದರು.

"ನಾನು ಗಿಡದ ಮೇಲೆ ಎತ್ತಿ ಕೂರಿಸಿದ ಆ ನಿಮ್ಮ ಪುಟ್ಟ ಜೊತೆಗಾರನೆಲ್ಲಿ?" ಎಂದು ಆತ ಮಕ್ಕಳನ್ನು ವಿಚಾರಿಸಿದ. ತನ್ನನ್ನು ಮುದ್ದಿಸಿದ ಆ ಬಾಲಕನ ಮೇಲೆ ಆತನಿಗೆ ಎಲ್ಲಿಲ್ಲದ ಮಮತೆ ಉಂಟಾಗಿತ್ತು.

"ಆತನ ಬಗ್ಗೆ ನಮಗೇನೂ ಗೊತ್ತಿಲ್ಲ. ಆತ ಎಲ್ಲೋ ದೂರ ಹೊರಟು ಹೋದ" ಎಂದು ಮಕ್ಕಳು ಉತ್ತರಿಸಿದರು.

"ನಾಳೆ ಇಲ್ಲಿಗೆ ಬರುವಂತೆ ಆತನಿಗೆ ನೀವು ಮರೆಯದೇ ಹೇಳಬೇಕು" ಎಂದು ಆತ ಮಕ್ಕಳನ್ನು ಕೋರಿದ.

ಆದರೆ ಆತನ ಮನೆ ಎಲ್ಲಿದೆ ಗೊತ್ತಿಲ್ಲ. ಈ ಮೊದಲು ಆತನನ್ನು ಕಂಡೇ ಇಲ್ಲ ಎಂದು ಮಕ್ಕಳು ಆತನಿಗೆ ವಿವರಿಸಿದರು. ಅವರ ಮಾತನ್ನು ಕೇಳಿ ರಾಕ್ಷಸನಿಗೆ ತುಂಬ ವ್ಯಥೆಯಾಯಿತು.

ನಿತ್ಯವೂ ಅಪರಾಹ್ನ ಶಾಲೆ ಬಿಟ್ಟ ಮೇಲೆ ಮಕ್ಕಳು ಹೂದೋಟಕ್ಕೆ ಬಂದು ಆ ರಾಕ್ಷಸನ ಜೊತೆ ಆಟವಾಡುತ್ತಿದ್ದರು. ಆದರೆ ರಾಕ್ಷಸನ ಅತ್ಯಂತ ಪ್ರೀತಿಯ ಆ ಪುಟ್ಟ ಬಾಲಕ ಎಲ್ಲಿಯೂ ಕಾಣಲೇ